**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 8/2023**

ಫ್ರಾಸಾ-03

ಚಾಸಾ-10

| | | |
|---|---|---|
| ಸಾಕ್ಷಿಯ ಹೆಸರು | - | ಮಂಜುನಾಥ ಅಯ್ಯನಗೌಡರ |
| ತಂದೆ ಹೆಸರು | - | ಅಯ್ಯನಗೌಡ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಸಿ ಎಚ್ ಸಿ 1528, ಹುಬ್ಬಳ್ಳಿ ಉಪನಗರ ಪೋಲಿಸಠಾಣೆ |
| ವಾಸಸ್ಥಳ | - | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 30-10-2025 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

2022 ರಿಂದ ನಾನು ಹುಬ್ಬಳ್ಳಿ ಉಪನಗರ ಪೋಲಿಸಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ರವಿಚಂದ್ರ ರವರು ಪೋಲೀಸ ಇನ್ಸಪೆಕ್ಟರ ಆಗಿ ಆಗ ಕೆಲಸ ಮಾಡುತ್ತಿದ್ದರು. ಚಾಸಾ-5 ರಿಂದ 9,11 ರಿಂದ 13 ರವರು ನನ್ನ ಸಹೋದ್ಯೋಗಿಗಳಾಗಿದ್ದರು.( ಹೆಸರುಗಳನ್ನು ಹೇಳಿರುತ್ತಾರೆ.) ಚಾಸಾ-14 ಉತ್ತರ ಉಪ ವಿಭಾಗದ ಎಸಿಪಿ ಆಗಿದ್ದರು.

2. ದಿಃ 4-12-2022 ರಂದು ನಾನು ಪೋಲಿಸಠಾಣೆಯಲ್ಲಿದ್ದಾಗ ಅಡಿಷನಲ್ ಪಿ.ಎಸ್.ಐ ಸಿ ಯು ಚಲುವಾದಿಯವರು ನನ್ನನ್ನು ಕರೆದು ಈ ದಿವಸ ನಮ್ಮ ಠಾಣೆಯ ಪೋಲೀಸ ಇನ್ಸಪೆಕ್ಟರ ರವಿಚಂದ್ರ ಬಿ ರವರು ತಮ್ಮೊಂದಿಗೆ ಠಾಣೆಯ ಅಪರಾಧ ವಿಭಾಗದ ಸಿಬ್ಬಂದಿ ಎಚ್ ಸಿ ರವರಾದ ಶ್ರೀನಿವಾಸ ಯರಗುಪ್ಪಿ , ಮಂಜುನಾಥ ಹಾಲವರ , ಕೃಷ್ಣ ಮೊಟೆಬೆನ್ನೂರ , ರೇಣಪ್ಪ ಸಿಕ್ಕಲಗಾರ ರವರೊಂದಿಗೆ ಠಾಣಾ ಹದ್ದಿಯಲ್ಲಿ ಪೆಟ್ರೋಲಿಂಗನಲ್ಲಿದ್ದಾಗ ಅವರಿಗೆ ಹುಬ್ಬಳ್ಳಿ ಚಾಂಟಿಮಠ ಕ್ರಾಸ ಹತ್ತಿರ ಒಂದು ಬಿಳಿ ಬಣ್ಣದಸಾಂತ್ರೋ ಕಾರ ನಂಃಎಂ.ಎಚ್-01-ಸಿ.ಎ 6935 ಕಾರಿನಲ್ಲಿ ಮಾದಕ ಪದಾರ್ಥವಾದ ಗಾಂಜಾವನ್ನು ಸಾಗಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಬಂದಿದ್ದು ಈ ಬಗ್ಗೆ ಕ್ರಮ

ಕೈಗೊಳ್ಳಲು ಪಿ ಐ ರವರು ಮುಂದಿನ ಕ್ರಮಕ್ಕಾಗಿ ಠಾಣೆಗೆ ಬಂದು ಸರ್ಕಾರಿ ತರ್ಫೆ ದೂರು ನೀಡಿರುತ್ತಾರೆ. ಈ ಬಗ್ಗೆ ಠಾಣೆಯ ಗುನ್ನಾ ನಂಃ 178/2022 ರಂತೆ ಪ್ರಕರಣ ದಾಖಲಾಗಿರುತ್ತದೆ ಈ ಪ್ರಕರಣದ ಮುಂದಿನ ತನಿಖೆ ಕುರಿತು ದಾಳಿಗಾಗಿ ಹೋಗೋಣ ಎಂದು ಮತ್ತು ನನಗೆ ತನಿಖಾ ಸಹಾಯಕನಾಗಿ ಅವರೊಂದಿಗೆ ಬರಲು ತಿಳಿಸಿದರು.

3. ಅದರಂತೆ ದಾಳಿ ಕುರಿತು ಪಂಚರನ್ನು ಕರೆದುಕೊಂಡು ಬರಲು ಪಿಸಿ 3030 ರವರಿಗೆ ತಿಳಿಸಿ ಅದರಂತೆ ಸರ್ಕಾರಿ ಪಂಚರನ್ನು ಹಾಜರುಪಡಿಸಿಕೊಳ್ಳಲು ಎಚ್ ಡಿ ಎಂ ಸಿ ಹುಬ್ಬಳ್ಳಿಗೆ ಪತ್ರದ ಮುಖಾಂತರ ಕಳುಹಿಸಿದರು. ಸ್ವಲ್ಪ ಸಮಯದ ನಂತರ ಸರ್ಕಾರಿ ಪಂಚರಾದ ಚೇತನ ರಾಠೋಡ ಮತ್ತು ಗೋಪಾಲ ಯರೂರ ರವರನ್ನು ಕರೆದುಕೊಂಡು ಬಂದು ಪಿ.ಎಸ್.ಐ ರವರ ಮುಂದೆ ಹಾಜರುಪಡಿಸಿದ್ದು , ಪಿ.ಎಸ್.ಐ ರವರು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿ ಅವರಿಗೆ ತಮ್ಮೊಂದಿಗೆ ದಾಳಿ ಕಾಲಕ್ಕೆ ಹಾಜರಿದ್ದು ಪಂಚನಾಮೆಯನ್ನು ಬರೆಸುವಂತೆ ತಿಳಿಸಿ ನೋಟೀಸ ಕೊಟ್ಟರು ಅದಕ್ಕೆ ಅವರು ಒಪ್ಪಿಕೊಂಡು ಅದಕ್ಕೆ ಒಪ್ಪಿಗೆ ಪತ್ರ ಕೂಡ ಅವರು ಕೊಟ್ಟರು. ಪಿ.ಎಸ್.ಐರವರು ಪಿಸಿ 3030 ರವರಿಂದ ತೂಕ ಮಾಡುವ ವ್ಯಕ್ತಿಯನ್ನು ಕರೆತರುವಂತೆ ತಿಳಿಸಿದರು. ನಂತರ ಪಿಸಿ ಯವರು ಹೋಗಿ ಮಲ್ಲಿಕಾರ್ಜುನ ತುಮ್ಮಿನಕಟ್ಟಿ ಎಂಬ ತೂಕ ಮಾಡುವವರನ್ನು ತೂಕದ ಮಶೀನನೊಂದಿಗೆ ಕರೆದುಕೊಂಡು ಬಂದು ಪಿ.ಎಸ್.ಐ ರವರ ಮುಂದೆ ಹಾಜರುಪಡಿಸಿದರು. ಪಿ.ಎಸ್.ಐ ರವರು ಅವರಿಗೂ ಸಹ ಪ್ರಕರಣದ ಮಾಹಿತಿ ನೀಡಿ ತಮ್ಮೊಂದಿಗೆ ಹಾಜರಿರುವಂತೆ ನೋಟೀಸ ನೀಡಿದರು. ಅದಕ್ಕೆ ಅವರು ಒಪ್ಪಿಕೊಂಡು ಒಪ್ಪಿಗೆ ಪತ್ರ ಕೂಡ ನೀಡಿದರು. ನಂತರ ದಾಳಿ ಕುರಿತು ಸಿಬ್ಬಂದಿ ಜನರಾದ ಶ್ರೀನಿವಾಸ ಯರಗುಪ್ಪಿ ಮಂಜುನಾಥ ಹಾಲವರ , ಮಂಜುನಾಥ ಯಕ್ಕಡಗಿ , ಕೃಷ್ಣ ಮೊಟೆಬೆನ್ನೂರ, ರೇಣಪ್ಪ ಸಿಕ್ಕಲಗಾರ , ಜಗದೀಶ ಶೆಟ್ಟಿ ಮತ್ತು ನನಗೆ ದಾಳಿ ಕಾಲಕ್ಕೆ ಬರುವಂತೆ ಮತ್ತು ಪಿಸಿ ಜ್ಞಾನೇಶ್ವರ ಮಾಂಗ ರವರಿಗೆ ದಾಳಿ ಕಾಲಕ್ಕೆ ಹಾಜರಿದ್ದು ಫೋಟೊ ತೆಗೆಯುವಂತೆ ತಿಳಿಸಿ ನಂತರ ಪಿ.ಎಸ್.ಐ ರವರು ಪಂಚರನ್ನು ಹಾಗೂ ತೂಕ ಮಾಡುವ ವ್ಯಕ್ತಿಯನ್ನು

ಪೋಲೀಸ ಇನ್ಸಪೆಕ್ಟರ ರವರಿಗೆ ಭೇಟಿ ಮಾಡಿಸಿ ಅವರ ಜೀಪನಲ್ಲಿ ಕರೆದುಕೊಂಡು ಹೋದರು. ನಾವು ನಮ್ಮ ಸ್ವಂತ ವಾಹನದಲ್ಲಿ ಅವರ ಜೀಪನ್ನು ಹಿಂಬಾಲಿಸುವಂತೆ ತಿಳಿಸಿ ಠಾಣೆಯಿಂದ ಮಧ್ಯಾಹ್ನ 12.05 ಘಂಟೆಗೆ ಹೊರಟು , ನಾವೆಲ್ಲ ಸಿಬ್ಬಂದಿ ನಮ್ಮ ಸ್ವಂತ ವಾಹನದಲ್ಲಿ ಅವರನ್ನು ಹಿಂಬಾಲಿಸಿದೆವು.

4. ನಂತರ ಚಟ್ನಿಮಠ ಕ್ರಾಸ ಬಳಿಇರುವ ಕಬರಸ್ಥಾನ ಬಳಿ ಪೋಲೀಸ ಇನ್ಸಪೆಕ್ಟರ ರವರ ಜೀಪು ಎದುರಿಗೆ ಬರುತ್ತಿದ್ದ ಒಂದು ಸಾಂಟ್ರೋ ಕಾರಗೆ ಅಡ್ಡವಾಗಿ ನಿಲ್ಲಿಸಿದ್ದು ನಾವು ನಮ್ಮ ಮೋಟಾರ ಸೈಕಲನ್ನು ರಸ್ತೆ ಬದಿ ನಿಲ್ಲಿಸಿದಾಗ ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳು ಕಾರು ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದರು. ಆಗ ನಾನು, ಪೋಲೀಸ ಇನ್ಸಪೆಕ್ಟರ , ಪಿ.ಎಸ್.ಐ ಎಲ್ಲರೂ ಹೋಗಿ ಅವರನ್ನು ಸುತ್ತುವರೆದು ಹಿಡಿದುಕೊಂಡೆವು. ಆಗ ಸಮಯ ಮಧ್ಯಾಹ್ನ 12.15 ಆಗಿತ್ತು. ನಂತರ ಪಿ.ಎಸ್.ಐ ರವರು ಅವರನ್ನು ಹಿಡಿದು ಕೊಂಡು ನೀವು ಯಾರು ಕಾರು ಬಿಟ್ಟು ಎಕೆ ಓಡುತ್ತಿದ್ದೀರಿ, ಕಾರನಲ್ಲಿ ಎನಿದೆ ಎಂದು ಕೇಳಿದಾಗ ಅವರು ಗಾಬರಿಯಾಗಿ ಒಬ್ಬರಿಗೊಬ್ಬರುಮುಖ ನೋಡಿಕೊಳ್ಳುತ್ತಿದ್ದರು ನಂತರ ನಮಗೆ ಕನ್ನಡ ಬರುವುದಿಲ್ಲ ನಾವು ಮಹಾರಾಷ್ಟ್ರದವರು ಎಂದು ಹಿಂದಿಯಲ್ಲಿ ಮಾತನಾಡಿದರು. ಆಗ ಪಿ.ಎಸ್.ಐ ರವರು ಅವರಿಗೆ ಹಿಂದಿ ಭಾಷೆಯಲ್ಲೇ ಮಾತನಾಡಿಸಿ ಯಾರು ಎನು ಕಾರು ಯಾಕೆ ಬಿಟ್ಟು ಹೋಗುತ್ತಿದ್ದೀರಿ ಎಂದು ವಿಚಾರಣೆ ಮಾಡಿದಾಗ , ಕಾರಿನ ಮುಂದೆ ಎಡಗಡೆ ಸೀಟಿನಲ್ಲಿ ಕುಳಿತ ವ್ಯಕ್ತಿ ತನ್ನ ಹೆಸರು ಅನಂತ ವಾಮನರಾವ್ ಥಾವರೆ ಎಂದು ಸಾಃ ಪರಾಂಡೆ ಮಹಾರಾಷ್ಟ್ರ ಎಂದು ಹಿಂದಿ ಭಾಷೆಯಲ್ಲಿ ಹೇಳಿದನು. ಕಾರು ಚಾಲಕನ ಹೆಸರು ಕೇಳಿದಾಗ ಅವನು ತನ್ನ ಹೆಸರು ನಾಗನಾಥ ತಂದೆ ಬಾಪು ಗಾಯಕವಾಡ ಎಂದು ಸಾಃಕೊಲ್ಲಾಪೂರ ಮಹಾರಾಷ್ಟ್ರ ಎಂದು ಹೇಳಿದ. ಪಿ.ಎಸ್.ಐ ರವರು ಅವರಿಗೆ ನಿಮ್ಮ ಕಾರಿನಲ್ಲಿ ಮಾದಕ ವಸ್ತು ಗಾಂಜಾ ಸಾಗಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುವ ಆಧಾರ ಮೇಲೆ ಹುಬ್ಬಳ್ಳಿ ಉಪ ನಗರ ಪೋಲಿಸಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಅವರಿಬ್ಬರಿಗೂ ಹಿಂದಿ ಭಾಷೆಯಲ್ಲಿ ಮಾಹಿತಿ ನೀಡಿದರು. ಆಗ ಅವರಿಬ್ಬರೂ ಎನೂ ಹೇಳದೆ ಒಬ್ಬರಿಗೊಬ್ಬರು ಮುಖ ನೋಡಿಕೊಂಡು ನಿಂತಿದ್ದರು.

ಆಗ ಪಿ.ಎಸ್.ಐ ರವರು ನಿಮ್ಮನ್ನು ಪರಿಶೀಲನೆ ಮಾಡಲು ಹತ್ತಿರದ ನ್ಯಾಯಾಧೀಶರ ಬಳಿ ಕರೆದುಕೊಂಡು ಹೋಗಬೇಕಾ ಅಥವಾ ಗೆಜೆಟೆಡ್ ಆಫೀಸರ್ ಸಮಕ್ಷಮ ಪರಿಶೀಲನೆ ಮಾಡಬಹುದಾ ಎಂದು ಅವರಿಬ್ಬರನ್ನೂ ಕೇಳಿ ನನ್ನಕಡೆಯಿಂದ ನೋಟೀಸ ಕೂಡ ತಯಾರು ಮಾಡಿಸಿ ಅವರಿಗೆ ಕೊಟ್ಟರು. ಆಗ ಅವರು ಗೆಜೆಟೆಡ್ ಆಫೀಸರ್ ಸಮಕ್ಷಮ ಪರಿಶೀಲನೆ ಮಾಡಬಹುದು ಎಂದು ಆರೋಪಿಗಳು ಹಿಂದಿಯಲ್ಲಿ ಹೇಳಿದರು ಅದನ್ನು ನಾನು ಕನ್ನಡದಲ್ಲಿ ಬರೆದು ಪುನಃ ಅದನ್ನು ಓದಿ ಹೇಳಿ ಅವರ ಸಹಿ ಪಡೆದುಕೊಂಡೆ. ನಾನು ನನ್ನ ಬರವಣಿಗೆಯಲ್ಲಿ ಬರೆದು ಕೊಟ್ಟ ನೋಟೀಸ ಮತ್ತು ಅವರು ಹೇಳಿದ ಉತ್ತರವನ್ನು ನಾನು ನ್ನನಬರವಣಿಗೆಯಲ್ಲಿ ಬರೆದಿರುವುದನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ಆರೋಪಿ ಅನಂತಗೆ ನೀಡಿದ ನೋಟೀಸ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 25 ಎಂದು ಗುರುತಿಸಲಾಗಿದೆ. ಅದೇರೀತಿ ಆರೋಪಿ ಅನಂತ ಹೇಳಿದ ಉತ್ತರ ತಾನು ತನ್ನ ಬರವಣಿಗೆಯಲ್ಲಿ ಬರೆದಿರುವುದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 26 ಎಂದು ಗುರುತಿಸಲಾಗಿದೆ. ಅದೇರೀತಿ ಆರೋಪಿ ನಾಗನಾಥಗೆ ನೀಡಿದ ನೋಟೀಸ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 27 ಎಂದು ಗುರುತಿಸಲಾಗಿದೆ. ಅದೇರೀತಿ ಆರೋಪಿ ನಾಗನಾಥ ಹೇಳಿದ ಉತ್ತರ ತಾನು ತನ್ನ ಬರವಣಿಗೆಯಲ್ಲಿ ಬರೆದಿರುವುದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 28 ಎಂದು ಗುರುತಿಸಲಾಗಿದೆ.

5. ನಂತರ ಪಿ.ಎಸ್.ಐ ರವರು ಪತ್ರಾಂಕಿತ ಅಧಿಕಾರಿ ಎಸಿಪಿ ವಿನೋದ ಮುಕ್ತೆದಾರ ರವರಿಗೆ ಪೋನ ಮಾಡಿ ಸ್ಥ,ಳ ಹೇಳಿ ಅವರನ್ನು ಅಲ್ಲಿಗೆ ಕರೆಸಿರುತ್ತಾರೆ. ನಂತರ ಎಸಿಪಿ ಯವರು ಅಲ್ಲಿಗೆ ಬಂದು ನಮ್ಮ ವಶದಲ್ಲಿದ್ದ ಇಬ್ಬರನ್ನೂ ವಿಚಾರಣೆ ಮಾಡಿರುತ್ತಾರೆ. ಆರೋಪಿ ಅನಂತ ರವರ ಅಂಗ ಜಪ್ತಿ ಮಾಡಿದಾಗ ಅವರ ಬಳಿ ರೂ. 600 ನಗದು ಹಣ ಹಾಗೂ ಒಂದು ನೋಕಿಯಾ ಕೀಪ್ಯಾಡ ಪೋನ ಹಾಗೂ ಸ್ಯಾಮಸಂಗ್ ಮೊಬೈಲ ಇತ್ತು. ಆರೋಪಿ ನಾಗನಾಥ ರವರ ಅಂಗ ಜಪ್ತಿ ಮಾಡಿದಾಗ ಅವರ ಬಳಿ ರೂ. 100 ಹಣ , ಒಂದು ಸ್ಯಾಮಸಂಗ್ ಪೋನ ಇತ್ತು. ನಂತರ ಅದನ್ನು ತೆಗೆದುಕೊಂಡು ಪಿ.ಎಸ್.ಐ ರವರಿಗೆ

ಕೊಟ್ಟು ಆರೋಪಿತರ ಕಾರು ಡಿಕ್ಕಿ ಓಪನ್ ಮಾಡಿಸಿದಾಗ ಡಿಕ್ಕಿಯಲ್ಲಿ ಟೇಪ ಸುತ್ತಿದ 3 ಬಂಡಲ್ ಗಳು ಇತ್ತು. ಅವುಗಳನ್ನು ಪಂಚರ ಸಮಕ್ಷಮ ಒಂದು ಭಾಗದಲ್ಲಿ ಓಪನ್ ಮಾಡಿ ನೋಡಿದಾಗ ಅದರಲ್ಲಿ ಮಾದಕ ಪದಾರ್ಥವಾದ ಗಾಂಜಾ ಇತ್ತು , ಘಾಟು ವಾಸನೆ ಬರುತ್ತಿತ್ತು ಅದು ತೆಲುಗು ನ್ಯೂಸ್ ಪೇಪರ್ ನಲ್ಲಿ ಸುತ್ತಿತ್ತು. ಆನಂತರ ಅದನ್ನು ಮಲ್ಲಿಕಾರ್ಜುನ ತುಮ್ಮಿನಕಟ್ಟಿ ಬಳಿ ತೂಕ ಮಾಡಿಸಿದಾಗ ಒಂದನೇ ಬಂಡಲನಲ್ಲಿ 4 ಕೆ ಜಿ 610 ಗ್ರಾಂ ಮಾದಕ ವಸ್ತು ಗಾಂಜಾ ಇತ್ತು. ಎರಡನೆ ಬಂಡಲನಲ್ಲಿ 4 ಕೆಜಿ 570 ಗ್ರಾಂ ಗಾಂಜಾ ಇತ್ತು. ಮೂರನೆ ಬಂಡಲನಲ್ಲಿ 6 ಕೆ ಜಿ 906 ಗ್ರಾಂ ಗಾಂಜಾ ಇತ್ತು. ಅದರಲ್ಲಿ ಬೀಜ , ಕಾಂಡ , ಎಲೆ ಹೂವು ಎಲ್ಲ ಇತ್ತು. ಅವುಗಳನ್ನು ತೂಕ ಮಾಡಿಸಿದ ನಂತರ ಸಿಬ್ಬಂದಿಗಳ ಮುಖಾಂತರ ಮೂರು ಬಂಡಲಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿಸಿ ನಾಲ್ಕು ಮೂಲೆಗೂ ಅರಗು ಹಚ್ಚಿ ನಟ್ ಬೋಲ್ಟನಿಂದ ಸೀಲು ಮಾಡಿದೆವು. ಆರೋಪಿತರಿಂದ ಜಪ್ತಾದ ಮೊಬೈಲ , ಹಣ ಇವುಗಳನ್ನು ಪ್ರತ್ಯೇಕವಾಗಿ ಎನವಲೆಪನಲ್ಲಿ ಹಾಕಿ ಪ್ಯಾಕ್ ಮಾಡಿದೆವು. ಮುಂದೆ ಪಂಚರ ಸಮಕ್ಷಮ ಪಂಚರು ಹೇಳಿದಂತೆ ದಾಳಿ ಸ್ಥಳದ ಜಪ್ತಾದ ವಸ್ತುಗಳ ಹಾಗೂ ಜಪ್ತಾದ ಕಾರ ನಂಃ ಎಂ ಎಚ್ 01 ಸಿಎ-6935 ಗಳ ವಿವರಗಳನ್ನು ಪಂಚನಾಮೆಯಲ್ಲಿ ಪಂಚರು ಹೇಳಿದಂತೆ ನಾನು ಬರೆದಿದ್ದೇನೆ. ಇವೆಲ್ಲ ಮಧ್ಯಾಹ್ನ 12.15 ರಿಂದ 14.15 ರವರೆಗೆ ಆಯಿತು. ಆ ಕಾಲಕ್ಕೆ ಜ್ಞಾನೇಶ್ವರ ಮಾಂಗ ರವರು ಫೋಟೊಗಳನ್ನು ತೆಗೆದಿರುತ್ತಾರೆ. ನಾನು ಬರೆದ ಪಂಚನಾಮೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತಾನು ಬರೆದ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಶಾನೆ ಪಿಃ 1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 1 (ಸಿ) ಎಂದು ಗುರುತಿಸಲಾಗಿದೆ. ನಂತರ ಪಿ.ಎಸ್.ಐ ರವರು ಪಂಚರ ಸಹಿ ಮತ್ತು ಗೆಜೆಟೆಡ್ ಆಫೀಸರ್ ಸಹಿ ಮತ್ತು ದಾಳಿಗೆ ಬಂದ ಸಿಬ್ಬಂದಿಗಳ ಸಹಿ ಮತ್ತು ಆರೋಪಿತರ ಸಹಿ , ತೂಕ ಮಾಡಿದ ವ್ಯಕ್ತಿಯ ಸಹಿ ಎಲ್ಲವನ್ನೂ ಪಡೆದುಕೊಂಡರು. ಆ ಸಮಯದಲ್ಲಿ ತೆಗೆದ ಫೋಟೊಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಶಾನೆ ಪಿಃ 2 ರಿಂದ ನಿಶಾನೆ ಪಿಃ 19 ಎಂದು

ಕ್ರಮವಾಗಿ ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ಒಂದು ಫೋಟೊದಲ್ಲಿರುವ ತನ್ನ ಭಾವಚಿತ್ರವನ್ನು ಸಾಕ್ಷಿ ಗುರುತಿಸಿದ್ದನ್ನು ನಿಶಾನೆ ಪಿಃ 13 (ಎ) ಎಂದು ಗುರುತಿಸಲಾಗಿದೆ. ಅಲ್ಲಿ ಆ ಫೋಟೊಗಳಲ್ಲಿ ಆ ಕಾರು ಕೂಡ ಕಾಣಿಸುತ್ತಿದೆ.

6. ಜಪ್ತಾದ ವಸ್ತುಗಳನ್ನು ಮತ್ತು ಆರೋಪಿಗಳನ್ನು ಸಿಬ್ಬಂದಿಗಳ ಸಹಾಯದಿಂದ ನಮ್ಮ ಸಾಹೇಬರು ನಂತರ ಪೋಲಿಸಠಾಣೆಗೆ ಕರೆದುಕೊಂಡು ಬಂದರು. ಈ ದಾಳಿಯಲ್ಲಿ ಪಾಲ್ಗೊಂಡ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಆನಂತರ ಪಿ.ಎಸ್.ಐ ರವರು 15–12–2022 ಕ್ಕೆ ಜಪ್ತಾದ ಗಾಂಜಾವನ್ನು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಇನವೆಂಟರಿ ಮಾಡಿಸಿದ ಬಗ್ಗೆ ದಿಃ 16–12–2022 ರಂದು ನನಗೆ ಮಾಹಿತಿ ನೀಡಿದ್ದು , ನಾನು ಆ ಮಾಹಿತಿ ತಿಳಿದುಕೊಂಡು ಪುನಃ ಆ ಬಗ್ಗೆ ಪುನರ್ ಹೇಳಿಕೆ ನೀಡಿರುತ್ತೇನೆ. ಇನವೆಂಟರಿ ಮಾಡುವ ಕಾಲಕ್ಕೆ ನಾವು ಜಪ್ತು ಮಾಡಿದ 3 ಬಂಡಲಗಳಲ್ಲಿ ಒಟ್ಟು 8 ಸ್ಯಾಂಪಲ್ ಪೀಸ್ ಅಂದರೆ ಒಂದು ಬಂಡಲನಲ್ಲಿ ಎರಡು ಮತ್ತು ಇನ್ನೆರಡು ಬಂಡಲಗಳಲ್ಲಿ ತಲಾ ಮೂರು ಸ್ಯಾಂಪಲುಗಳನ್ನು ತೆಗೆದಿರುವುದಾಗಿ ನನಗೆ ಪಿ.ಎಸ್.ಐ ರವರು ಮಾಹಿತಿ ಕೊಟ್ಟರು. ಪಿ.ಎಸ್.ಐ ರವರು ಇನವೆಂಟರಿ ಕಾಲಕ್ಕೆ ಆ ಬಂಡಲ ಓಪನ್ ಮಾಡಿದಾಗ ಒಂದು ಬಂಡಲನಲ್ಲಿ ಎರಡು ಬ್ಯಾಗು ಇತ್ತು ಮತ್ತು ಇನ್ನು ಎರಡು ಬಂಡಲಗಳಲ್ಲಿ ತಲಾ ಮೂರು ಬ್ಯಾಗುಗಳು ಇತ್ತು ಆದ್ದರಿಂದ ಅವುಗಳಿಂದ ತಲಾ 30 ಗ್ರಾಂ ಪ್ರಕಾರ 8 ಸ್ಯಾಂಪಲುಗಳನ್ನು ತೆಗೆದಿರುವುದಾಗಿ ನನಗೆ ಮಾಹಿತಿ ಕೊಟ್ಟರು.ನಂತರ ಆ ಸ್ಯಾಂಪಲಗಳನ್ನು ಕೂಡ ನನಗೆ ತೋರಿಸಿರುತ್ತಾರೆ. ಪೋನುಗಳು ಮತ್ತು ಕ್ಯಾಶ್ ಎಲ್ಲ ನೋಡಿದರೆ ಗುರುತಿಸಬಲ್ಲೆ ಎಂದು ಹೇಳಿರುತ್ತಾರೆ. ಅವುಗಳನ್ನು ಈಗಾಗಲೇ ಮುಮಾ–1 ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿ ಅಲ್ಲಿ ತೆಗೆದ 8 ಸ್ಯಾಂಪಲ್ ಪಾಕೇಟಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಮುಮಾ–6 ರಿಂದ 13 ಎಂದು ಗುರುತಿಸಲಾಗಿದೆ. ( ಅವರಿಗೆ ವಶಪಡಿಸಿಕೊಂಡ ಸೀಲು ಮಾಡಿದ ಸ್ಯಾಂಪಲ್ ಪಾಕೇಟಗಳನ್ನು ತೋರಿಸಿರುವುದರಿಂದ ಈ ಸಾಕ್ಷಿಗೆ ಸೀಲು ಒಡೆಯದೇ ಆ ಸ್ಯಾಂಪಲ್ ಪಾಕೇಟಗಳನ್ನು

ತೋರಿಸಲಾಗಿದೆ).ಆ ದಿನ ವಶಪಡಿಸಿಕೊಂಡ 3 ಬಂಡಲಗಳು ಫೋಟೊಗಳಲ್ಲಿದೆ ಎಂದು ಸಾಕ್ಷಿ ಈಗಾಗಲೇ ಅವರು ಗುರುತು ಹಿಡಿದ ನಿಶಾನೆ ಪಿಃ 17 ಫೋಟೊ ನೋಡಿ ಗುರುತಿಸಿರುತ್ತಾರೆ. ಆ ದಿನ ಅಲ್ಲಿದ್ದ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿತರ ಪರ ಶ್ರೀ ವಕೀಲರಿಂದಃ</u>**

ಪಾಟಿ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ.ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

ಫ್ರಾಸಾ–04
ಚಾಸಾ– 07